ಹೋದ ಮೇಲೆ, ಹೆಂಡತಿ ಹತ್ತಿರ ಕೊಸರಾಡಿ, 'ಈಗಲೇ ಹೋಗಿ ಡಾಕ್ಟರ್ ಸರ್ಟಿಫಿಕೇಟ್ ಮಾಡಿಸಿ, ಬುದ್ಧಿಜೀವಿಗಳ ಮೇಲೆ ಗೂಂಡಾಗಿರಿ ಮಾಡಿದಾರೆ ಅಂತ ಪ್ರೆಸ್‌ಮೀಟ್ ಮಾಡಿ, ಅವುರನ್ನೆಲ್ಲ ಜೈಲಿಗೆ ಕಳುಸ್ತೀನಿ...' ಎಂದು ಎಗರಾಡಿದರು. 'ಅವರು ಯಾರು ಅಂತಲೇ ಗೊತ್ತಿಲ್ಲ, ಯಾರ ಮೇಲೆ ಅಂತ ಕಂಪ್ಲೆಂಟ್ ಕೊಡ್ತೀರಾ... ಕೊಟ್ರೂ ಅವರು ಲೋಕಲ್ನೋರು, ತಕ್ಷಣ ಎಮ್ಮೆಲ್ಲೆ, ಎಂಪೀಗಳ ಫೋನು ಬರುತ್ತೆ... ಅವರನ್ನೇನೂ ಮಾಡಕ್ಕಾಗಲ್ಲ.. ಬಾಯ್ಮುಚ್ಕಂಟ್ ಬರ್‍ರೀ... ಪ್ರಚಾರ ಮಾಡಕ್ಹೋದ್ರೆ ಮರ್ಯಾದೆ ಹೋಗೋದು ನಿಮದೇ ಹೊರತು ಅವರದಲ್ಲ... ನಿಮ್ಮುನ್ನ ಕಟ್ಕೊಂಡಾಗಿಂದ ಇದೇ ಆಗೋಯ್ತು... ಯಾವೂರಿಗೋದ್ರೂ ನಿಮ್ದು ಇದೇ ಹಣೇಬರಹ, ನಾನೇನ್ಮಾಡಕ್ಕಾಗುತ್ತೆ... ಮೊದಲು ಮನೆಗೆ ಬನ್ನಿ, ಉಪ್ಪಿನ ಕಾವು ಕೊಡ್ತೀನಿ...' ಎಂದು ಮೂರೂವರಡಿಯ ಪಾವಂದಯ್ಯನವರ ಅಳಿದುಳಿದ ಜುಟ್ಟನ್ನು ಹಿಡಿದು ಎಳೆದುಕೊಂಡು ಹೋದಳು.

ಹರಿದ ಬಟ್ಟೆ ತೆಗೆದು ಮೈಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸಿ ಉಪಚರಿಸುವಷ್ಟರಲ್ಲಿ ಆಳುಮಗ ಮಲ್ಲೇಶಿ, ದೀಪಾವಳಿ ಹಬ್ಬಕ್ಕೆಂದು ತಂದು ಮಿಕ್ಕಿದ್ದ ಪಟಾಕಿಯ ಬಾಕ್ಸ್ ಒಂದನ್ನು ಎಲ್ಲಿಂದಲೋ ತಂದಿದ್ದ. ಅಷ್ಟರಲ್ಲಿ ಕೋತಿಗಳೂ ತಮ್ಮ ಪೂರ್ವಜರ ಚೇಷ್ಟೆಗಳ ಜೊತೆ ತಮ್ಮದೂ ಒಂದಷ್ಟು ಸೇರಿಸಿ, ಅತ್ತಿಂದಿತ್ತ ಇತ್ತಿಂದತ್ತ ನೆಗೆಯುತ್ತ ತೆಂಗಿನಮರ, ಅಡಿಕೆಮರದ ಪೀಚುಗಳನ್ನೆಲ್ಲ ಕವರೀ ಕವರಿ ಟೇಸ್ಟ್ ನೋಡೀ ನೋಡಿ ಬಿಸಾಕುತ್ತಿದ್ದುದರಿಂದ ಬುಡದ ಸುತ್ತ ರಂಗೋಲಿ ಬಿಡಿಸಿದಂತಾಗಿತ್ತು. ಇದೀಗ ತಾನೆ ಅಪರಿಚಿತರಿಂದ ಹೊಡೆತ ತಿಂದುಬಂದ ಸಿಟ್ಟು, ಮುಂದೆ ಸಾವಿರಾರು ರೂಪಾಯಿ ಬೆಲೆ ಬಾಳಬಹುದಾಗಿದ್ದ ಫಸಲನ್ನೆಲ್ಲ ಹಾಳು ಮಾಡಿದ ರೋಷವನ್ನೆಲ್ಲ ಸೇರಿಸಿ, ಆ ಪಟಾಕಿಗಳನ್ನು ಬಾಂಬಿನಂತೆ ಉಡಾಯಿಸಿ ಕೋತಿಯ ವಂಶವನ್ನೇ ನಿರ್ವಂಶ ಮಾಡಿಬಿಡುವವರಂತೆ ಮುನ್ನುಗ್ಗಿದರು. ಒರೆಗಣ್ಣಿನಲ್ಲೇ ಗಮನಿಸಿ, ಮಲ್ಲೇಶಿಗೆ ತನ್ನ ಮೇಲೆ ನಡೆದ ಆಕ್ರಮಣದ ಸುದ್ದಿ ಗೊತ್ತಿಲ್ಲದುದನ್ನು ಖಚಿತಪಡಿಸಿಕೊಂಡರು. ಗೊತ್ತಾಗಿಬಿಟ್ಟರೆ ಮುಂದೆ ಎಲ್ಲಿ ತನ್ನ ಮಾತಿಗೆ ಬೆಲೆ ಕೊಡಲಾರನೋ ಎಂಬ ಆತಂಕ ಅವರದು.

**'ಅಯ್ಯೋ, ಇದು ಮನೆಕಾಯೋಗ... ನಮ್ಮ ತೋಟನೆಲ್ಲ ಹಾಳುಗೆಡುವುತ್ಯೆತಲ್ಲ...' ಎಂದು ಕೋತಿಗಳಿಗೆ ಹಿಡಿಶಾಪ ಹಾಕುವ ವೇಳೆಗೆ ಬೆಂಕಿಗೆ ಬೆಂದು ಅರೆಜೀವವಾದ ಎರಡು ಮಂಗಗಳು ನೆಲಕ್ಕೆ ಬಿದ್ದವು. ಎಲ್ಲಿ ತಪ್ಪಿಸಿಕೊಂಡು ಹೋಗಿಬಿಟ್ಟಾವೋ ಎಂದು ಮಣ್ಣಹೆಂಟೆಯಿಂದ ಹೊಡೆಯಲುಪಕ್ರಮಿಸುವ ವೇಳೆಗೆ...**

ಹಚ್ಚಿದ ಪಟಾಕಿಗಳಲ್ಲಿ ಹಲವು ಕಣ್ಣೆದುರಿಗೇ ಠುಸ್ ಎಂದು ಚಿಂದಿ ಉಡಾಯಿಸಬೇಕೆಂದಿದ್ದವರಿಗೆ ಭ್ರಮನಿರಸನ ಉಂಟುಮಾಡಿದವು. ಅದರ ಸಿಟ್ಟನ್ನೆಲ್ಲ ಮಲ್ಲೇಶಿಗೆ ಬೈಯ್ಯುವ ಮೂಲಕ ತೀರಿಸಿಕೊಂಡರು. ಮರಕ್ಕೆ ಒಂದು ಎರಡರಂತೆ ಹಂಚಿಕೊಂಡಂತೆ ಕದ್ದುಕುಳಿತಿದ್ದ ಅವುಗಳ ಬುಡಕ್ಕೇ ನೇರವಾಗಿ ಸಿಡಿಯುವಂತೆ ರಾಕೆಟ್‌ಗಳನ್ನು ಹಚ್ಚಿ ಬಿಟ್ಟರು.